ಕೃಷ್ಣ ಹಾಗೂ ಕಾವೇರಿ ಬೇಸಿನ್‌ಗೆ ಒಳಪಟ್ಟ ನೀರಾವರಿ ಯೋಜನೆಗಳಿಗೆ ಬಿಡುಗಡೆಯಾದ ಹಣ

2834 (3561) ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) : ಮಾನ್ಯ ಬೃಹತ್ ಮತ್ತು ನೀರಾವರಿ ಮಂತ್ರಿಗಳು ಈ ಕಳೆಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೃಷ್ಣಾ ಬೇಸಿನ್ ಹಾಗೂ ಕಾವೇರಿ ಬೇಸಿನ್‌ಗೆ ಒಳಪಟ್ಟ ನೀರಾವರಿ ಯೋಜನೆಗಳಿಗೆ 1998 ರಿಂದ ಇಲ್ಲಿಯವರೆಗೆ ಬಿಡುಗಡೆಯಾದ ಹಣವೆಷ್ಟು ;

ಆ) ಕೃಷ್ಣ ಬೇಸಿನ್ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :

ಅ) ವೆಚ್ಚವಾದ ಹಣ (ಕೋಟಿ ರೂ.ಗಳಲ್ಲಿ)

	1998-99	99-2000	2000-01 (ಆಗಸ್ಟ್‌ವರೆಗೆ)
ಕೃಷ್ಣ ಕೊಳದ ಯೋಜನೆಗಳು	1355.66	1303.15	550.98
ಕಾವೇರಿ ಕೊಳದ ಯೋಜನೆಗಳು	281.40	262.43	66.12

ಆ) ಕೃಷ್ಣ ಕೊಳ್ಳದ ಯೋಜನೆಗಳನ್ನು ಎಲ್ಲಾ ರೀತಿಯಿಂದ 3 ವರ್ಷಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಮುಜರಾಯಿ ಹಾಗೂ ವಕ್ಫ್ ಇಲಾಖೆಗಳಿಗೆ ಹಣ ಬಿಡುಗಡೆ ಬಗ್ಗೆ

2835 (3545) ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣ (ಸದಲಗ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿರುವ ಮುಜರಾಯಿ ಇಲಾಖೆಗಳಿಗಾಗಿ ಪ್ರತಿ ಇಲಾಖೆಯಿಂದ ಕಾಯ್ದಿರಿಸಲಾಗಿದೆ; ಕಳೆದ ಮೂರು ವರ್ಷಗಳ ವಿವರ ನೀಡುವುದು;

ಆ) ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಕಲ್ಯಾಣ ಮಂಟಪ ನಿರ್ಮಾಣ ಮಾಡುವುದು ಹಾಗೂ ಹೊಸ ದೇವಸ್ಥಾನಗಳ ನಿರ್ಮಾಣ ಕಾರ್ಯಕ್ಕೆ ನೀಡುತ್ತಿರುವ ಮೊತ್ತವು ಬಹಳ ಕಡಿಮೆಯಾಗಿದೆ ಎಂಬುದು ನಿಜವೆ;

ಇ) ಹಾಗಿದ್ದಲ್ಲಿ ಮುಜರಾಯಿ ಇಲಾಖೆಗಳಿಗೆ ಸಾಕಷ್ಟು ಹಣ ಬಿಡುಗಡೆ ಮಾಡಲಾಗುವುದೇ;

ಶ್ರೀ ಬಾಬುರಾವ್ ಚಿಂಚನಸೂರ (ಮುಜರಾಯಿ ರಾಜ್ಯ ಸಚಿವರು) :

ಅ) ಮುಜರಾಯಿ ಇಲಾಖೆಗೆ ರಾಜ್ಯ ಆಯವ್ಯಯದಲ್ಲಿ ಈ ಕೆಳಕಂಡಂತೆ ಹಣವನ್ನು ಹಂಚಿಕೆ ಮಾಡಲಾಗಿತ್ತು.